# ನಿರ್ಜೀವ ಬೆರ್ಚಪ್ಪನಿಗೆ ತೊಡಿಸಿದ ರಂಗಿನ ಬಟ್ಟೆ



**ತಾಂತ್ರಿಕ ಕಾರಣಗಳಿಗೆ ಗಮನೆಳೆಯುವ ‘ದಿ ನಿಯೊಲಿತ್’ ಕಿರುಚಿತ್ರ ಸೊರಗುವುದು ಕಥನದ ವಿಷಯದಲ್ಲಿ. ದೃಶ್ಯ ಶ್ರೀಮಂತಿಕೆಯಲ್ಲಿ ಬೆರಗು ಮೂಡಿಸುವ ಈ ಕಿರುಚಿತ್ರ ದರ್ಶನದ ವಿಷಯಕ್ಕೆ ಬಂದರೆ ಸಣಕಲಾಗಿ ಕಾಣುತ್ತದೆ.**

■ ಗೌರಿ

ಮನುಷ್ಯನ ಆದಿಮರೂಪ ಎನ್ನುವುದು ಸಿನಿಮಾ ಮಂದಿಗೆ ಬಹುಆಕರ್ಷಣೀಯ ವಸ್ತುಗಳಲ್ಲೊಂದು. ಜನರಿಗೂ ಅದರ ಕುರಿತು ಅಷ್ಟೇ ಆಕರ್ಷಣೆ ಇರುವುದರಿಂದ ಆ ಕಥೆಯನ್ನಿಟ್ಟುಕೊಂಡು ಬಂದ ಹಲವು ಸಿನಿಮಾಗಳು ದೊಡ್ಡ ಮಟ್ಟದಲ್ಲಿ ಹಿಟ್ ಆಗಿವೆ. ಆದರೆ ಅದೇ ವಸ್ತುವನ್ನಿಟ್ಟುಕೊಂಡು ಬಂದ ಕಿರುಚಿತ್ರಗಳು ಸ್ವಲ್ಪ ಕಮ್ಮಿಯೇ. ಡೇನಿಯಲ್ ಬೂಕಾಕ್ ನಿರ್ದೇಶನದ ‘ದಿ ನಿಯೋಲಿಥ್’ ಕಿರುಚಿತ್ರ ಈ ಕಾರಣಕ್ಕಾಗಿಯೇ ಗಮನಸೆಳೆಯುತ್ತದೆ.

‘ಕಿರುಚಿತ್ರಗಳ ಕುರಿತಾದ ವ್ಯಾಖ್ಯಾನ ಬದಲಾಯಿಸಲಿಕ್ಕಾಗಿಯೇ ನಾನು ಈ ಕಿರುಚಿತ್ರವನ್ನು ಮಾಡಿದ್ದೇನೆ’ ಎಂದು ನಿರ್ದೇಶಕರೇ ಹೇಳಿಕೊಂಡಿದ್ದಾರೆ. ಆದರೆ ಅವರು ಹೇಳಿದ ಹಾಗೆ ಕಿರುಚಿತ್ರ ಮಾಧ್ಯಮದ ವ್ಯಾಖ್ಯಾನವನ್ನೇನೂ ಬದಲಿಸುವಷ್ಟು ಇದು ಶಕ್ತವಾಗಿಲ್ಲ. ಆದರೆ ಕೆಲವು ಕಾರಣಕ್ಕೆ ಖಂಡಿತವಾಗಿಯೂ ನೋಡಬಹುದಾದಂಥ ಕಿರುಚಿತ್ರ.

ದಟ್ಟವಾದ ಹುಲ್ಲುಗಾವಲು, ಎತ್ತರದ ಗಿರಿಶ್ರೇಣಿಗಳಿಂದ ಆವೃತವಾದ ಪ್ರದೇಶದಲ್ಲಿ ನಡೆಯುವ ಕತೆ ಇದು. ಅರ್ಧ ಗಂಟೆಯ ಈ ಕಿರುಚಿತ್ರದಲ್ಲಿ ಸಂಭಾಷಣೆ ಇರುವುದು ಎರಡೇ ಎರಡು. ನಿರ್ದೇಶಕರಿಗೆ ಸಂಭಾಷಣೆಗಿಂತ ದೃಶ್ಯವೈಭವದ ಕುರಿತು, ನಟರಿಗಿಂತ ಅವರ ಲುಕ್‌ನ ಕುರಿತು ನಂಬಿಕೆ ಇರುವುದಕ್ಕೆ ಚಿತ್ರದೊಳಗೇ ಹೇರಳ ಪುರಾವೆಗಳು ದೊರಕುತ್ತವೆ. ಹಾಗೆ ನೋಡಿದರೆ ಬೂಕಾಕ್ ಅವರ ನಿರ್ದೇಶನಕ್ಕಿಂತಲೂ ಛಾಯಾಗ್ರಹಣವೇ ಇಡೀ ಕಿರುಚಿತ್ರವನ್ನು ಆಳಿದೆ. ಧ್ವನಿವಿನ್ಯಾಸವು ಅದರ ಹೆಗಲಿಗೆ ಹೆಗಲು ಕೊಟ್ಟು ಕಿರುಚಿತ್ರವನ್ನು ಎತ್ತಿಹಿಡಿದಿದೆ.



**ಹೆಸರು: ದಿ ನಿಯೊಲಿತ್**
**ನಿರ್ದೇಶನ-ನಿರ್ಮಾಣ/ ಸಂಕಲನ: ಡೇನಿಯಲ್ ಬೂಕಾಕ್**
**ಛಾಯಾಗ್ರಹಣ: ಆ್ಯಂಡ್ರ್ಯೂ ಸ್ಕೋಲ್ಡರ್**
**ಧ್ವನಿವಿನ್ಯಾಸ: ಸ್ಯಾಮ್ ಆಗಸ್ಟೆ, ಪೌಲ್ ಹಾರ್ಡ್ಲಿ**
**ತಾರಾಗಣ: ಜಾಕ್ ಕೋರಿ, ಡ್ಯಾನ್ ಬೋಯಿ ಕ್ರಾಟ್ಸಲ್, ನನ್ನಾ ಲೈನೆ ಆಂಡರ್ಸನ್, ಜೆಸ್ಪರ್ ಬೋರ್ಲೆ**

ಬಹುತೇಕ ಏರಿಯಲ್‌ಶಾಟ್‌ಗಳನ್ನೇ ಬಳಸಿಕೊಂಡಿರುವುದರಲ್ಲಿ, ಸಾಧ್ಯವಾದಷ್ಟೂ ಮನೋಹರವಾಗಿ ದೃಶ್ಯಗಳನ್ನು ಕಟ್ಟಿಕೊಡಬೇಕು ಎಂಬ ಹಂಬಲವಿರುವುದಷ್ಟೇ ಅಲ್ಲ, ನೋಡುಗರ ನೋಟದ ಮೇಲೆ ಹಿಡಿತ ಸಾಧಿಸುವ ತಂತ್ರಗಾರಿಕೆಯೂ ಇದೆ.

ತುಸು ಅಮೂರ್ತವಾಗಿಯೇ ಶುರುವಾಗುವ ಈ ಕಿರುಚಿತ್ರ ನಾಗರಿಕ ಮತ್ತು ಬುಡಕಟ್ಟು ಸಂಸ್ಕೃತಿಗಳ ಸಂಘರ್ಷವನ್ನು ಕಟ್ಟಿಕೊಡುವ ಪ್ರಯತ್ನವನ್ನು ಮಾಡುತ್ತದೆ. ಆದರೆ ಆ ಸಂಘರ್ಷ ಈ ಚಿತ್ರದ ಕೇಂದ್ರದಲ್ಲಿ ನೆಲೆಯೂರದೆ, ಪಾತ್ರಗಳ ಚಹರೆ, ದೃಶ್ಯಗಳ ವೈಭವದಲ್ಲಿಯೇ ಕಳೆದುಹೋಗಿದೆ. ಹಾಗಾಗಿಯೇ ಇದು ನೋಡುವಷ್ಟೂ ಹೊತ್ತು ಮೈಮರೆಸುತ್ತದೆ; ಮುಗಿದ ಮೇಲೆ ಮನಸೊಳಗೆ ರಿಂಗಣಿಸಿ ಕಾಡುವ ಗುಣವನ್ನು ಹೊಂದಿಲ್ಲ.

ಇದರ ಧ್ವನಿ ವಿನ್ಯಾಸದ ಕುರಿತು ಉಲ್ಲೇಖಿಸಲೇಬೇಕು. ಚಿತ್ರ ಆರಂಭವಾಗುವಾಗಲೇ ಆಕಾಶದಲ್ಲಿ ನದಿಗುಂಟ ಸಾಗುವ ಕ್ಯಾಮೆರಾದ ಜೊತೆಗೆ ಮೂಡುವ ನಿಗೂಢ ಅನಿಸುವಂಥ ಧ್ವನಿ ನಮ್ಮನ್ನು ಆ ಕ್ಷಣಕ್ಕೆ ಹಿಡಿದಿಡುತ್ತದೆ. ಒಟ್ಟಾರೆ ಧ್ವನಿ ವಿನ್ಯಾಸವೇ ಮತ್ತೊಂದು ದಾರಿಯಲ್ಲಿ ಒಂದು ಕಥವನ್ನು ಹೇಳುತ್ತಿರುವಷ್ಟು ಸಶಕ್ತವಾಗಿದೆ.

ಚಿತ್ರವನ್ನು ಕಟ್ಟುವಲ್ಲಿ ಇರುವ ಆಸಕ್ತಿ, ಚಿತ್ರದ ಮೂಲಕ ಬದುಕನ್ನು ಕಾಣಿಸುವಲ್ಲಿ ನಿರ್ದೇಶಕರಿಗೆ ಇಲ್ಲ. ಆ ಕ್ಷಣಕ್ಕೆ ಬೆರಗುಗೊಳಿಸುವ ದೃಶ್ಯಗಳನ್ನು ಸಾಲು ಸಾಲಾಗಿ ನೀಡುವ ಅವರು ಅದರ ಆಳದಲ್ಲಿ ಹುದುಗಿರಬಹುದಾದ ದರ್ಶನದ ಕುರಿತು ತಲೆಕೆಡಿಸಿಕೊಳ್ಳಲು ಹೋಗಿಲ್ಲ. ಹಾಗಾಗಿಯೇ ಇದು ಕೊನೆಗೂ ಪೊಳ್ಳು ಬೆರ್ಚಪ್ಪನಿಗೆ ತೊಡಿಸಿದ ವೈಭವೋಪೇತ ಬಟ್ಟೆಗಳ ಹಾಗೆ ಕಾಣಿಸುತ್ತದೆ. ಆದರೆ ಈಗ ಇರುವ ತಾಂತ್ರಿಕ ಕೌಶಲದ ಜೊತೆಗೆ ಕಥನದ ಆತ್ಮ ಹಿಡಿಯುವ ಪ್ರಯತ್ನ ಮಾಡಿದರೆ ನಿರ್ದೇಶಕರಿಂದ ಸತ್ವಶಾಲಿಯಾದ ಸಿನಿಮಾ ಮೂಡುವುದು ಸಾಧ್ಯವಿದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/3lbkzqT ಕೊಂಡಿ/ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.